# ಅಂಗೈಯಲ್ಲಿ ಅರಮನೆ

## ಬಾಸುಂಡೆ

ನಮ್ಮ ಮನೆಯ ಮೇಲಿದ್ದ ಮಹಡಿ ಮನೆಗೆ ಧಾರವಾಡದ ಕುಟುಂಬವೊಂದು ಬಾಡಿಗೆಗೆ ಬಂದಿತ್ತು. ಅಂದು ಬೆಳಗ್ಗೆ ನನ್ನ ಮಗ ಅವರ ಮನೆಗೆ ಹೋದವನು ಒಂದು ಗಂಟೆಯ ನಂತರ ಹಿಂತಿರುಗಿ ಬಂದು, 'ಅಪ್ಪಾ ಮಹಡಿ ಮನೆಯವರು ನನಗೆ ಬಾಸುಂಡೆ ಕೊಟ್ಟರು' ಎಂದ. ನಾನು ಸಿಟ್ಟಿನಿಂದ, 'ಏ, ಎಲ್ಲಾ ಬಿಟ್ಟು ನಿನಗ್ಯಾಕೋ ಬಾಸುಂಡೆ ಕೊಟ್ರು? ನೀನೇನು ತಪ್ಪು ಮಾಡಿದೆ?' ಎಂದು ಕೇಳಿದೆ. ಅವನು, 'ಅಯ್ಯೋ, ಸಿಹಿ ತಿನ್ನೋಕೆ ತಪ್ಪು ಮಾಡಿರಬೇಕಾ? ನಾನೇನೂ ತಪ್ಪು ಮಾಡಿಲ್ಲ, ಅವರು ಪ್ರೀತಿಯಿಂದ ಕೊಟ್ಟರು, ತಿಂದೆ' ಎಂದ. 'ಅದು ಬಾಸುಂಡೆ ಅಲ್ಲವೋ ಬಾಸುಂದಿ' ಎಂದು ತಿದ್ದಿದೆ.

**ಎಂ.ಕೆ.ಮಂಜುನಾಥ್**



---



## ಮೈತ್ರಿಯಿಂದ ನಷ್ಟ...

ಸರಕಾರಿ ಪದವಿ ಪೂರ್ವ ಕಾಲೇಜಿನ ಪಿಯುಸಿ ತರಗತಿಗಳನ್ನು ತೆಗೆದುಕೊಳ್ಳುವಾಗ ನಡೆದ ಘಟನೆ. ಅಂದೊಂದು ದಿನ 'ಪಕ್ಷ ಪದ್ಧತಿ ಸ್ವರೂಪದಲ್ಲಿ ಮೈತ್ರಿ ಸರಕಾರ'ದ ಕುರಿತು ಪಾಠ ಮಾಡುವಾಗ, 'ಮೈತ್ರಿಯಿಂದ ನಮ್ಮ ರಾಷ್ಟ್ರಕ್ಕೆ ಲಾಭಕ್ಕಿಂತ ನಷ್ಟವೇ ಹೆಚ್ಚು' ಎಂದು ಹೇಳುತ್ತಿದ್ದೆ. ಮೊದಲ ಬೆಂಚಿನಲ್ಲಿ ಕೂತಿದ್ದ ಮೈತ್ರಿ ಹೆಸರಿನ ವಿದ್ಯಾರ್ಥಿನಿ ತಕ್ಷಣ ಎದ್ದು ನಿಂತು, 'ಮೇಡಮ್, ಅದು ಹೇಗೆ? ನನಗೂ ದೇಶದ ಸಂಕಷ್ಟಕ್ಕೂ ಏನು ಸಂಬಂಧ?' ಎಂದು ಹುಬ್ಬು ಗಂಟಿಕ್ಕಿಕೊಂಡು ಪ್ರಶ್ನಿಸಿದಳು. ಅವಳ ಪ್ರಶ್ನೆಗೆ ಇಡೀ ತರಗತಿಯ ವಿದ್ಯಾರ್ಥಿಗಳು ಗಹಗಹಿಸಿ ನಕ್ಕರು.

**ದೀಪಶ್ರೀ ಎಸ್. ಕೂಡ್ಲಿಗಿ**